ಎಂ ವಿ ಸಿ ನಂ. 121/2023
ಪಿ ಡಬ್ಲ್ಯು 1
ದಿನಾಂಕ 20-02-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರಃ ಶ್ರೀ ಜೆ ಪಿ ಎಲ್ ವಕೀಲರಿಂದಃ

ಮಮತರವರು ನನಗೆ ಅತ್ತಿಗೆಯಾಗಬೇಕು. ಎರಡನೇ ಅರ್ಜಿದಾರರಾದ ಹರ್ಷಿತರವರು ನನ್ನ ಅಣ್ಣನಾದ ಮಲ್ಲೇಶಪ್ಪರವರ ಮಗಳು. ಪರಿಹಾರದ ಅರ್ಜಿಯಲ್ಲಿ ಬರೆದಿರುವ ವಿಚಾರಗಳನ್ನು ನಾನು ನನ್ನ ವಕೀಲರಿಂದ ಕೇಳಿ ತಿಳಿದುಕೊಂಡಿರುತ್ತೇನೆ. ಕೆಎ-66 ಕೆ-6651 ರ ದ್ವಿಚಕ್ರ ವಾಹನ ಎರಡನೇ ಎದುರುದಾರರಿಗೆ ಸೇರಿದ್ದಾಗಿರುತ್ತದೆ. ಅಪಘಾತವಾದ ದಿನ ಸದರಿ ದ್ವಿಚಕ್ರ ವಾಹನವನ್ನು ಮಲ್ಲೇಶಪ್ಪರವರು ಚಾಲನೆ ಮಾಡುತ್ತಿದ್ದರು. ಸದರಿಯವರಿಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಪರವಾನಿಗಿ ಇರುತ್ತದೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತದ ಸಮಯದಲ್ಲಿ ಸದರಿ ದ್ವಿಚಕ್ರವಾಹನಕ್ಕೆ ವಿಮೆ ಚಾಲ್ತಿಯಲ್ಲಿತ್ತು. ಆದರೆ ಯಾವ ಸಂಸ್ಥೆಯಿಂದ ವಿಮೆ ಪಡೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಮೂರನೇ ಎದುರುದಾರರು ನೀಡಿರುವ ವಿಮಾ ಪಾಲಿಸಿಯಂತೆ ದ್ವಿಚಕ್ರ ವಾಹನದ ಹಿಂಬದಿ ಸವಾರರಿಗೆ ಯಾವುದೇ ಪರಿಹಾರ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ಮಲ್ಲೇಶಪ್ಪರವರ ಅಜಾಗರೂಕತೆಯಿಂದ ಆಗಿರುವುದರಿಂದ ಮೂರನೇ ಎದುರುದಾರರು ಪರಿಹಾರ ಕೊಡಲು ಬಾದ್ಯರಲ್ಲ ಎಂದರೆ ಸರಿಯಲ್ಲ. 2 ನೇ ಅರ್ಜಿದಾರರನ್ನು ಮಲ್ಲೇಶಪ್ಪರವರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದು ನುಡಿಯುತ್ತಾರೆ.

ಮಲ್ಲೇಶಪ್ಪರವರು ಪ್ರಸ್ತುತ ಏನು ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಏನು ಕೆಲಸ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ.

ಮೃತ ಮಮತರವರಿಗೆ 35 ವರ್ಷ ವಯಸ್ಸು ಆಗಿದೆ ಎಂದು ತೋರಿಸುವ ಬಗ್ಗೆ ಆಧಾರ್ ಕಾರ್ಡನ್ನು ಹಾಜರುಪಡಿಸಿರುತ್ತೇನೆ. ಮಮತರವರು ವ್ಯವಸಾಯ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಮಮತರವರಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ದೋಷರೋಪಣಾ ಪತ್ರದಂತೆ ಮಲ್ಲೇಶಪ್ಪರವರ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿ. ಆಗಾಗಿ ಪರಿಹಾರವನ್ನು ಮಲ್ಲೇಶಪ್ಪರವರೇ ಕೊಡಬೇಕು, ಮೂರನೇ ಎದುರುದಾರರು ಅಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕೇಳಿರುವಂತಹ ಪರಿಹಾರ ಪಡೆಯಲು ನಾವು ಅರ್ಹರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.